ಪ್ರವಾಸಿ ಮಂದಿರದ ಬಗ್ಗೆ.

೬೧೧ ಶ್ರೀ ಪಿ. ಸಿ. ಸಿದ್ದನಗೌಡರು(ಕಲಘಟಗಿ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ತಾಲ್ಲೂಕಿನ ತಿರುಮಲಕೊಪ್ಪದಲ್ಲಿ ಪ್ರವಾಸಿ ಮಂದಿರದ ಕಟ್ಟಡವನ್ನು ಹೊಸದಾಗಿ ಕಟ್ಟಿಸುವ ವಿಚಾರ ಸರಕಾರದವರ ಮುಂದೆ ಇದೆಯೇ ?

ಆ) ಕುಂದಗೋಳ ತಾಲ್ಲೂಕಿನ ಮಂಕ್ಕಿಮಂದಿರ ಧರ್ಮಕ್ಷೇತ್ರದಲ್ಲಿ ಪ್ರವಾಸಿ ಮಂದಿರವನ್ನು ವಿಸ್ತರಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.
ಆ) ಇಲ್ಲ.

ಏತ ನೀರಾವರಿ ಯೋಜನೆ ಬಗ್ಗೆ,

೬೧೨. ಶ್ರೀ ಪಿ. ಸಿ. ಸಿದ್ದನಗೌಡರು (ಕಲಘಟಗಿ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಲಘಟಗಿ ತಾಲ್ಲೂಕಿನ ಗಳಗನಘಟ್ಟ ಹಳ್ಳಕ್ಕೆ ಏತ ನೀರಾವರಿ ಮಂಜೂರು ಮಾಡಲಾಗಿದೆಯೆ ?

ಶ್ರೀ ಹೆಚ್. ಡಿ ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಡಾಂಬರ ರಸ್ತೆಯ ಬಗ್ಗೆ.

೬೧೩. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಲಘಟಗಿ ಕ್ಷೇತ್ರದ ಬ್ಯಾಹಟ್ಟಿಯಿಂದ ಅಳಗವಾಡಿವರೆಗೆ ಡಾಂಬರ್ ರಸ್ತೆ ಮಾಡುವ ಯೋಜನೆ ಸರಕಾರದವರ ಮುಂದೆ ಇದೆಯೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಆಚ್ಚುಕಟ್ಟು ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ರಸ್ತೆಯಲ್ಲಿ ೮.೭ ಕಿ. ಮಿ. ಉದ್ದವು ಡಾಂಬರು ರಸ್ತೆಯಾಗಿದ್ದು ಬಾಕಿ ಉದ್ದಕ್ಕೆ ಡಾಂಬರು ಹಾಕುವುದನ್ನು ಹಣದ ಲಭ್ಯತೆಯನ್ನಾಧರಿಸಿ ಪರಿಶೀಲಿಸಲಾಗುವುದು.

ಸರ್ಕಾರಿ ಮುದ್ರಣಾಲಯದ ಕಟ್ಟಡದ ಒಂದು ಭಾಗವನ್ನು ಬಾಡಿಗೆ ನೀಡಿರುವ ಬಗ್ಗೆ

೬೪೮. ಶ್ರೀ ಜಿ. ನಾರಾಯಣಸ್ವಾಮಿ (ಬಿನ್ನಮೇಟೆ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಮುದ್ರಣಾಲಯದ ಕಟ್ಟಡಕ್ಕೆ ಅಂಟಿಕೊಂಡಂತಿರುವ ಎರಡು ಮಳಿಗೆಗಳನ್ನು (ಒಂದು ಹೋಟೆಲ್, ಇನ್ನೊಂದು ಅಂಗಡಿ) ಯಾವ ಆಧಾರದ ಮೇಲೆ ಬಾಡಿಗೆಗೆ ಕೊಡಲಾಗಿದೆ. ಅವುಗಳಿಗೆ ಪ್ರತಿ ತಿಂಗಳು ಕೊಡುತ್ತಿರುವ ಬಾಡಿಗೆ ಎಷ್ಟು ?